ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಸಿಂಹಬಾಲದ ಕೋತಿಗಳು

ಕಾಡಿನ ನಡುವೆ ಹೆಚ್ಚಿದ ಕಂದಕಗಳು ಅನೇಕ ಕಾಡು ಪ್ರಾಣಿಗಳ ಸ್ವಭಾವವನ್ನೇ ಬದಲಿಸಿ ಹಾಕಿವೆ. ದಟ್ಟ ಕಾಡಿನ ಅನಂತತೆಯನ್ನು ಗದ್ದೆ ತೋಟಗಳು, ಟಾರು ರಸ್ತೆಗಳು, ಬೆಳೆದ ಹಳ್ಳಿಗಳು ಕತ್ತರಿಸಿ ಬಿಟ್ಟಿವೆ.



ತಮಿಳುನಾಡಿನ ವಾಲ್ಪರೈಗೆ ಹೋದ ನಮಗೆ ಮೂರು ದಿನವಾದರೂ ನಾವು ಆಸೆ ಇಟ್ಟುಕೊಂಡಿದ್ದ ಆ ಪ್ರಾಣಿ ಸಿಗಲಿಲ್ಲ. ಹುಡುಕಿ ಸಾಕಾಗಿ ಬರಿಗೈಯಲ್ಲಿ ವಾಪಸ್ಸು ಬರುವಾಗ ಪುದುತೋಟಂ ಎಂಬ ಊರನ್ನು ನೋಡಿದೆವು. ಜೀವಜಾಲ ಪುಸ್ತಕದಲ್ಲಿ ಕೃಪಾಕರಸೇನಾನಿ ಮತ್ತು ಡಾ.ಕೆ.ಪುಟ್ಟಸ್ವಾಮಿ ಅವರು ಹೇಳಿದ್ದಜಾಗ ಇದೇ ಎಂದು ಗೊತ್ತಾದಾಗ ಕಣ್ಣು ಚುರುಕಾದವು. ನೋಡಲಾಗಿ ರಸ್ತೆ ಬದಿಯಲ್ಲಿ ಕೂತಿದ್ದ ಗಡ್ಡಧಾರಿ ಕಪ್ಪು ಪ್ರಾಣಿ ಓಹೋ ಅದೇ ಹೌದು. ಕಾರನ್ನು ಗಕ್ಕನೆ ನಿಲ್ಲಿಸಿದೆ. “ಅರೆರೆ ಇದೇ ಕಣೋ! ನಾವು ಹುಡುಕುತ್ತಿದ್ದ ಬಡ್ಡೀಮಗಂದು” ಎಂದವರೆ ನನ್ನ ಪಕ್ಕವಿದ್ದ ಲೋಕೇಶ್ ಮೊಸಳೆ ಕೂಗಿಕೊಂಡರು. ಕಾರಿಗೆ ಬ್ರೇಕು ಬಿದ್ದದ್ದೇ ತಡ ಮೊಸಳೆ ಮತ್ತು ಪುಷ್ಪರಾಜ್ ಇಬ್ಬರೂ ಕ್ಯಾಮೆರಾ ಎತ್ತಿಕೊಂಡು ಅವಸರಗೆಟ್ಟವರಂತೆ ಕಾರಿನಿಂದ ಎಗರಿ ಅತ್ತ ಕಡೆ ಹೊರಟರು. ಅದು ಅಲ್ಲೇ ಕೂತಿತ್ತು.

ನಾನು ತೀರಾ ರಸ್ತೆಯಲ್ಲೇ ಇದ್ದ ಕಾರನ್ನು ಒಂದು ಬದಿಗೆಲ್ಲಾದರೂ ನಿಲ್ಲಿಸಲು ಕಷ್ಟಬೀಳುತ್ತಿದ್ದೆ. ಅಲ್ಲೇ ಬಸ್ಸಿಗೆ ಕಾಯುತ್ತಿದ್ದ ಜನ “ಇದು ಬಸ್ಸು ನಿಲ್ಲುವ ಜಾಗ. ಮುಂದೆ ಎಲ್ಲಾದರೂ ಕಾರು ನಿಲ್ಲಿಸಿ” ಎಂದು ತಮಿಳಿನಲ್ಲಿ ತಾಕೀತು ಮಾಡಿದರು. ಅದಂತೂ ತೀರಾ ಇಕ್ಕಟ್ಟಾದ ಮತ್ತು ಅಪಾಯಕಾರಿ ತಿರುವಿದ್ದ ಟಾರ್ ರಸ್ತೆ. ಯಾವ ಸೈಡಿಗೂ ನೆಟ್ಟಗೆ ಕಾರು ನಿಲ್ಲಿಸಲು ಅಲ್ಲಿ ತಾವೇ ಇರಲಿಲ್ಲ. ಸ್ವಲ್ಪ ದೂರ ಹೋಗಿ ವಾಹನ ನಿಲ್ಲಿಸಿ ನನ್ನ ಕ್ಯಾಮೆರಾ ಎತ್ತಿಕೊಂಡು ಓಡಿ ಬರುವುದರೊಳಗೆ ಗೆಳೆಯರಿಬ್ಬರು ಆ ಪ್ರಾಣಿಯ ಒಳ್ಳೆಯ ಫೋಟೊಗಳನ್ನು ಕೆಚ್ಚಿಕೊಂಡಿದ್ದರು. ನಾ ಬರುವಷ್ಟರಲ್ಲೇ ಅದು ತನ್ನ ಜಾಗ ಬದಲಿಸಿ ಮರವೇರಿ ಕೂತಿತ್ತು. ಇದೇ ನಾನು ಬಹು ಆಸೆಯಿಂದ ಹುಡುಕುತ್ತಿದ್ದ ಸಿಂಹಬಾಲದ ಕೋತಿ.

ಅಷ್ಟರಲ್ಲೇ ಎಲ್ಲೋ ಇದ್ದ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ವಾಚರನೊಬ್ಬ ಅವಸರವಾಗಿ ಓಡೋಡಿ ಬಂದವನೆ “ಈ